ದಿನಾಂಕಃ 22-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ನಾನು ವ್ಯವಸಾಯ ಮಾಡುತ್ತೇನೆ. ನನಗೆ 3 ಎಕರೆ ವ್ಯವಸಾಯ ಜಮೀನು ಇರುತ್ತದೆ. ಸದರಿ ಆಸ್ತಿ ನನ್ನ ತಾಯಿ ಹೆಸರಿನಲ್ಲಿ ಇರುತ್ತದೆ. ನನ್ನ ಹೆಸರಿನಲ್ಲಿ 20 ಗುಂಟೆ ಆಸ್ತಿ ಇರುತ್ತದೆ. ನನಗೆ ವ್ಯವಸಾಯದಿಂದ ವಾರ್ಷಿಕ 6 ರಿಂದ 7 ಲಕ್ಷ ಆದಾಯ ಇರುತ್ತದೆ. ಸದರಿ ಜಮೀನಿನಲ್ಲಿ ತರಕಾರಿ ಮತ್ತು ಜೋಳ ಬೆಳೆಯುತ್ತೇವೆ. ದಿನಾಂಕ 03.01.2025 ರಂದು ನನ್ನ ಬಳಿ ಹಣ ಇರುವ ಬಗ್ಗೆ ದಾಖಲಾತಿ ಇರುವುದಿಲ್ಲ. ಆದರೆ, ನಾನು ವ್ಯವಸಾಯಗಾರನಾಗಿರುವುದರಿಂದ ಮನೆಯಲ್ಲಿ ಹಣವನ್ನು ಇಟ್ಟಿರುತ್ತೇವೆ. ವ್ಯವಸಾಯ ಮಾಡಲು ಖರ್ಚು ಬರುತ್ತದೆ ಎಂದರೆ ಸರಿ.

2) ನಾನು 150 ಕ್ವಿಂಟಲ್ ಭತ್ತವನ್ನು ಬೆಳೆಯುತ್ತೇನೆ. ಆರೋಪಿಯ ಗಂಡ 3 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಪುಟ್ಟಶೆಟ್ಟಿ ರವರು ಆರೋಪಿ ಗಂಡನ ವಿರುದ್ಧ ಪ್ರಕರಣ ದಾಖಲು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪುಟ್ಟಶೆಟ್ಟಿ ರವರು ದಾಖಲು ಮಾಡಿದ ಪ್ರಕರಣ ವಜಾ ಆದ ನಂತರ ಪುಟ್ಟಶೆಟ್ಟಿ ರವರು ನನ್ನ ಮೂಲಕ ಈ ಪ್ರಕರಣ ದಾಖಲು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿ ನಡುವೆ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ.

3) ನಿಶಾನೆ ಪಿ-1 ಚೆಕ್ಕನ್ನು ಆರೋಪಿ ಬರೆದುಕೊಂಡು ಬಂದು ಕೊಟ್ಟಿರುತ್ತಾರೆ. ನಿಶಾನೆ ಪಿ-1 ಚೆಕ್ಕಿನಲ್ಲಿ ಆರೋಪಿ ಮತ್ತು ಅವರ ಮಗ ಸಹಿ ಮಾಡಿರುತ್ತಾರೆ. ನನಗೆ ಓದಲು ಬರೆಯಲು ಬರುವುದಿಲ್ಲ. ನಿಶಾನೆ ಪಿ-1 ಚೆಕ್ಕನ್ನು ಬ್ಯಾಂಕಿನಲ್ಲಿ ಬರೆದಿರುತ್ತೇನೆ

ಎಂದರೆ ಸರಿಯಲ್ಲ. ನಾನು ಹಣ ನೀಡಿದಾಗ ಆರೋಪಿ ಚೆಕ್ಕು ನೀಡಿರುತ್ತಾರೆ. ಆರೋಪಿಯ ಮಗನ ವಿರುದ್ಧ ಪ್ರಕರಣ ದಾಖಲು ಮಾಡಿರುವುದಿಲ್ಲ. ನಾನು ಪುಟ್ಟಶೆಟ್ಟಿ ರವರಿಂದ ಚೆಕ್ಕನ್ನು ಪಡೆದುಕೊಂಡು ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಓದಲು ಮತ್ತು ಬರೆಯಲು ಬರದ ಕಾರಣ ಚೆಕ್ಕಿನಲ್ಲಿರುವ ವಿವರಗಳು ಗೊತ್ತಿರುವುದಿಲ್ಲ. ನಿಶಾನೆ ಪಿ-1 ಚೆಕ್ಕಿನಲ್ಲಿರುವ ಸಹಿ ಆರೋಪಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 03.01.2025 ರಂದು ಚೆಕ್ಕು ನೀಡಿರುತ್ತಾರೆ. ನನಗೆ ರೂ. 2,50,000/ - ಹಣವನ್ನು ನೀಡುವ ಆರ್ಥಿಕ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಚೆಕ್ಕನ್ನು ನಾನೇ ಬರೆದಿರುತ್ತೇನೆ ಎಂದರೆ ಸರಿಯಲ್ಲ. ತಿಳುವಳಿಕೆ ಪತ್ರ ಆರೋಪಿಗೆ ಜಾರಿಯಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಪುಟ್ಟಶೆಟ್ಟಿರವರ ಮಾತು ಕೇಳಿ ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ